154 ಸೀಲ, ನಿ=72 = (74)

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ. ರವಿ ಇವರು ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ

**ಪ್ರಶ್ನೆ:**

ಕರ್ನಾಟಕ ರಾಜ್ಯ ಫುಟ್ಬಾಲ್ ಸಂಸ್ಥೆಯ ಬೆಂಗಳೂರಿನಲ್ಲಿರುವ ಕ್ರೀಡಾಂಗಣವು ದುಸ್ಥಿತಿಯಲ್ಲಿದ್ದು ಶಿಥಿಲಗೊಂಡಿರುವ ಕಟ್ಟಡವು ಯಾವುದೇ ವೇಳೆ ಕುಸಿಯುವ ಅಪಾಯದಲ್ಲಿದೆ. ಡ್ರೆಸ್ಸಿಂಗ್ ಮತ್ತು ವಿಶ್ರಾಂತಿ ಕೋಣೆಗಳ ಅವ್ಯವಸ್ಥೆ ಬಳಕೆಗೆ ಯೋಗ್ಯವಲ್ಲದ ಶೌಚಾಲಯದಿಂದಾಗಿ ಆಟಗಾರರಿಗೆ ಅದರಲ್ಲೂ ವಿಶೇಷವಾಗಿ ಮಹಿಳಾ ಆಟಗಾರ್ತಿಯರಿಗೆ ತುಂಬ ತೊಂದರೆಯಾಗಿದೆ. ಫುಟ್‌ಬಾಲ್ ಮೈದಾನವು ಗಾಂಜಾ ಅಡ್ಡೆಯಾಗಿ ಪರಿವರ್ತನೆ ಆಗಿದ್ದು ಗಾಂಜಾ ಸೇವಿಸಲು ಬರುವವರನ್ನು ಪ್ರಶ್ನಿಸಿದರೆ ಚೂರಿ ತೋರಿಸಿ ಬೆದರಿಕೆ ಒಡ್ಡುತ್ತಿದ್ದಾರೆ.

ಕರ್ನಾಟಕ ಫುಟ್ಬಾಲ್ ಆಟಗಾರರೆಂದರೆ ಇಡೀ ಭಾರತವೇ ಬೆರಗುಗಣ್ಣಿನಿಂದ ನೋಡುತ್ತಿದ್ದ ಕಾಲವೊಂದಿತ್ತು. ರಾಜ್ಯದ ಆಟಗಾರರು ದೇಶದ ಪ್ರತಿಷ್ಠಿತ ಕ್ಲಬ್ ಗಳ ಬೆನ್ನೆಲುಬಾಗಿದ್ದರು, ಆದರೆ ಈಗ ಕನ್ನಡಿಗ ಫುಟ್ಬಾಲಿಗರು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. 11 ವರ್ಷದಿಂದ ರಾಜ್ಯದ ಯಾರೊಬ್ಬರೂ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯದಿರುವುದನ್ನು ನೋಡಿದರೆ ರಾಜ್ಯದಲ್ಲಿ ಫುಟ್ಬಾಲ್ ಕ್ರೀಡಾಂಗಣಕ್ಕೆ ಮಾತ್ರವಲ್ಲ ರಾಜ್ಯದ ಫುಟ್ಬಾಲ್ ಗೇ ದುಸ್ಥಿತಿ ಬಂದೊದಗಿದೆ.

ಇಡೀ ರಾಜ್ಯಕ್ಕೆ ಇರುವ ಈ ಒಂದೇ ಒಂದು ಫುಟ್ಬಾಲ್ ಕ್ರೀಡಾಂಗಣವನ್ನು ಉಳಿಸುವ ಅವಶ್ಯಕತೆ ಇದ್ದು, ರಾಜ್ಯ ಸರ್ಕಾರ ತಕ್ಷಣ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು ಅಗತ್ಯ ಅನುದಾನ ಒದಗಿಸಬೇಕು ಜೊತೆಗೆ ರಾಜ್ಯ ಫುಟ್ಬಾಲ್‌ಗೂ ಕಾಯಕಲ್ಪ ಕಲ್ಪಿಸಿ ತಾಲ್ಲೂಕುಗಳಲ್ಲಿ ತಳಮಟ್ಟದಲ್ಲಿ ಪ್ರತಿಭೆಗಳನ್ನು ಗುರುತಿಸಿ ಬೆಳೆಸುವ ಕಾರ್ಯ ತುರ್ತಾಗಿ ಆಗಲೇಬೇಕಿದೆ. ಈ ವಿಚಾರವನ್ನು ಗಮನ ಸೆಳೆಯುವ ಸೂಚನೆ ಮೂಲಕ ಚರ್ಚಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

**ಉತ್ತರ**

ಪ್ರಸ್ತುತ ಕರ್ನಾಟಕ ರಾಜ್ಯ ಫುಟ್ ಬಾಲ್ ಸಂಸ್ಥೆಯ ಫುಟ್ಬಾಲ್ ಕ್ರೀಡಾಂಗಣವಿರುವ ಸ್ಥಳವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತಾಗಿರುತ್ತದೆ. ಸದರಿ ಸ್ಥಳವನ್ನು ಮಹಾನಗರ ಪಾಲಿಕೆಯಿಂದ ರಾಜ್ಯ ಫುಟ್ ಬಾಲ್ ಸಂಸ್ಥೆಗೆ ಲೀಸ್ ಮೇಲೆ ಒದಗಿಸಿರುತ್ತದೆ.

ಫುಟ್ಬಾಲ್ ಕ್ರೀಡಾಂಗಣದ ಮರು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಭೂ ಬಳಕೆ ಬದಲಾವಣೆಗೆ (Change of land use) ಹಾಗೂ ಲೀಸ್ ಡೀಡ್ ನಲ್ಲಿ ಮಾರ್ಪಾಡು ಮಾಡುವುದು (Amendment of the lease deed) ಅಗತ್ಯವಿದ್ದು, ಸದರಿ ವಿಷಯದ ಕುರಿತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ನಗರಾಭಿವೃದ್ಧಿ ಇಲಾಖೆಗಳಿಂದ ಪರಿಶೀಲಿಸಲಾಗುತ್ತಿದೆ.

ಫುಟ್ಬಾಲ್ ಕ್ರೀಡೆಯನ್ನು ಪ್ರೋತ್ಸಾಹಿಸಲು ಹಾಗೂ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಸಲುವಾಗಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ 2024-25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಫುಟ್ಬಾಲ್ ಸಂಸ್ಥೆಗೆ ಒಟ್ಟು ರೂ.50.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಿದ್ದು, ಈಗಾಗಲೇ ಶೇಕಡ 50% ರಷ್ಟು ಅನುದಾನ ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದ 50% ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿರುವ ಅನುದಾನಕ್ಕೆ ಕರ್ನಾಟಕ ರಾಜ್ಯ ಫುಟ್ಬಾಲ್

ಸಂಸ್ಥೆ ಇವರು ಉಪಯೋಗಿತಾ ಪತ್ರ ಮತ್ತು ಕ್ರಿಯಾ ಯೋಜನೆ ವರದಿಯನ್ನು ಸಲ್ಲಿಸಿದ ನಂತರ ಬಿಡುಗಡೆ ಮಾಡಲಾಗುವುದು.

**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಫುಟ್ಬಾಲ್ ಕ್ರೀಡೆಯ ಪ್ರೋತ್ಸಾಹಕ್ಕಾಗಿ ಈ ಕೆಳಕಂಡಂತೆ ಸೌಲಭ್ಯಗಳನ್ನು ಒದಗಿಸಲಾಗಿದೆ:**

- **ಬಳ್ಳಾರಿ** ಜಿಲ್ಲೆಯಲ್ಲಿ ಅಂದಾಜು ರೂ. 6 ಕೋಟಿಗಳ ವೆಚ್ಚದಲ್ಲಿ ಅಂತರಾಷ್ಟ್ರೀಯ ಮಟ್ಟದ ಕೃತಕ ಹುಲ್ಲುಹಾಸಿನ ಫುಟ್ಬಾಲ್ ಟರ್ಫ್ ನಿರ್ಮಿಸಲಾಗಿದೆ. ಸದರಿ ಅಂಕಣದಲ್ಲಿ ನೂರಾರು **ಕ್ರೀಡಾಪಟುಗಳು ಫುಟ್ಬಾಲ್ ಕ್ರೀಡೆಯ ತರಬೇತಿ ಪಡೆಯುತ್ತಿದ್ದು, ಹಲವಾರು ಫುಟ್ಬಾಲ್** ಪಂದ್ಯಾವಳಿಗಳನ್ನು ಏರ್ಪಡಿಸಲಾಗುತ್ತಿದೆ.

- **ಬೆಂಗಳೂರು ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಅಂತರಾಷ್ಟ್ರೀಯ ಮಟ್ಟದ ನೈಸರ್ಗಿಕ** ಫುಟ್ಬಾಲ್ ಅಂಕಣ ನಿರ್ಮಿಸಲಾಗಿದೆ. ಸದರಿ ಅಂಕಣದಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಫುಟ್ಬಾಲ್ ಪಂದ್ಯಾವಳಿಗಳನ್ನು ಆಯೋಜಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ವರ್ಷವೂ Indian Super League ಫುಟ್ಬಾಲ್ ಪಂದ್ಯಾವಳಿಯನ್ನು **ಆಯೋಜಿಸಲು ಅವಕಾಶ ಕಲ್ಪಿಸಿದ್ದು, ಸದರಿ Super League ಪಂದ್ಯಾವಳಿಗೆ ಶ್ರೀ ಕಂಠೀರವ** ಕ್ರೀಡಾಂಗಣದ ಫುಟ್ಬಾಲ್ ಅಂಕಣವು ಹೋಂ ಟರ್ಫ್ ಆಗಿರುತ್ತದೆ. ಈ ಪಂದ್ಯಾವಳಿಗಳನ್ನು ಸಾವಿರಾರು ಫುಟ್ಬಾಲ್ ಕ್ರೀಡಾ ಪ್ರೇಕ್ಷಕರು ವೀಕ್ಷಿಸುತ್ತಾರೆ.

- **ಫುಟ್ಬಾಲ್ ಕ್ರೀಡೆಯನ್ನು ಉತ್ತೇಜಿಸಲು** ರಾಜ್ಯದ ಎಲ್ಲಾ **28** ಜಿಲ್ಲಾ ಕ್ರೀಡಾಂಗಣದಲ್ಲಿ ಪಾರಂಪರಿಕ ಮಣ್ಣಿನ ಫುಟ್ಬಾಲ್ ಅಂಕಣವನ್ನು ನಿರ್ಮಿಸಿದ್ದು, ಫುಟ್ಬಾಲ್ ಕ್ರೀಡೆಯಲ್ಲಿ ಆಸಕ್ತಿ ಇರುವ ಕ್ರೀಡಾಪಟುಗಳಿಗೆ ತರಬೇತಿ ನೀಡಲಾಗುತ್ತಿದೆ.

- **ಕ್ರೀಡಾ ವಸತಿ ಶಾಲೆ/ ನಿಲಯಗಳು**: ರಾಜ್ಯದಲ್ಲಿ ಒಟ್ಟು 34 ಕ್ರೀಡಾ ವಸತಿ ಶಾಲೆಗಳಿದ್ದು, ಇದರಲ್ಲಿ ವಿಶೇಷವಾಗಿ ಫುಟ್ಬಾಲ್ ಕ್ರೀಡೆಯ ತರಬೇತಿಗಾಗಿ ಈ ಕೆಳಕಂಡ ಜಿಲ್ಲೆಗಳಲ್ಲಿ ಕ್ರೀಡಾ ವಸತಿ ನಿಲಯಕ್ಕೆ ಪ್ರವೇಶ ನೀಡಲಾಗಿದೆ.

| **ಕ್ರ.ಸಂ** | **ಕ್ರೀಡಾ ಶಾಲೆ/ ವಸತಿ ನಿಲಯ** | **ತರಗತಿ** | **ಕ್ರೀಡೆ** | **ಒಟ್ಟಾರೆ ಕ್ರೀಡಾಪಟುಗಳು** |
|---|---|---|---|---|
| 01 | ವಿದ್ಯಾನಗರ | 8 ರಿಂದ 10 | ಫುಟ್ಬಾಲ್ | 29 |
| 02 | ಬಳ್ಳಾರಿ | ಪ್ರಥಮ ಪಿ.ಯು.ಸಿ ಮೇಲ್ಪಟು | ಫುಟ್ಬಾಲ್ | 56 |
| 03 | ಮಂಡ್ಯ | 5 ರಿಂದ10 | ಫುಟ್ಬಾಲ್ | 10 |
| 04 | ಚಿಕ್ಕಬಳ್ಳಾಪುರ | 5 ರಿಂದ 7 | ಫುಟ್ಬಾಲ್ | 16 |
| 05 | ಚಾಮರಾಜನಗರ | 5 ರಿಂದ 7 | ಫುಟ್ಬಾಲ್ | 30 |
| 06 | ರಾಯಚೂರು | 5 ರಿಂದ10 | ಫುಟ್ಬಾಲ್ | 14 |
| 07 | ಕೋಲಾರ | 5 ರಿಂದ10 | ಫುಟ್ಬಾಲ್ | 14 |
| | | | **ಒಟ್ಟು** | **169** |

## ಇತರೆ ಪ್ರೋತ್ಸಾಹಕ ಯೋಜನೆಗಳು:

- **ನಗದು ಪುರಸ್ಕಾರ:-** ಅಂತಾರಾಷ್ಟ್ರೀಯ ಕ್ರೀಡೆಯಾಗಿರುವ ಫುಟ್ಬಾಲ್ ಕ್ರೀಡೆಯನ್ನು ಒಳಗೊಂಡಂತೆ ಭಾರತವನ್ನು ಪ್ರತಿನಿಧಿಸಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಕೆಳಕಾಣಿಸಿದಂತೆ ನಗದು ಪುರಸ್ಕಾರವನ್ನು ನೀಡಲಾಗುತ್ತಿದೆ.

**(ರೂ.ಲಕ್ಷಗಳಲ್ಲಿ)**

| ಕ್ರ. ಸಂ. | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಒಲಂಪಿಕ್ ಗೇಮ್ಸ್ | 600.00 | 400.00 | 300.00 |
| 2 | ಏಷಿಯನ್ ಗೇಮ್ಸ್ | 35.00 | 25.00 | 15.00 |
| 3 | ಕಾಮನ್ ವೆಲ್ತ್ ಗೇಮ್ಸ್ | 35.00 | 25.00 | 15.00 |
| 4 | ವರ್ಲ್ಡ್ ಕಪ್/ಚಾಂಪಿಯನ್ ಷಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾಗಿ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು) | 5.00 | 3.00 | 2.00 |
| 5 | ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗೊಳಿಗೊಮ್ಮೆ ನಡೆಯುವ ಕ್ರೀಡೆಗಳು) | 5.00 | 3.00 | 2.00 |
| 6 | ನ್ಯಾಷನಲ್ ಚಾಂಪಿಯನ್ ಷಿಪ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 2.00 | 1.00 | 0.50 |
| 7 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 0.50 | 0.25 | 0.15 |
| 8 | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 0.25 | 0.15 | 0.10 |

- **ಕ್ರೀಡಾ ವಿದ್ಯಾರ್ಥಿ ವೇತನ:-** ರಾಜ್ಯ ಮಟ್ಟದಲ್ಲಿ ಚಿನ್ನದ ಪದಕ ಅಥವಾ ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಮಾಧ್ಯಮಿಕ ಶಾಲಾ ಹಂತದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ವಾರ್ಷಿಕ ತಲಾ ರೂ 10,000/-ಗಳ ಕ್ರೀಡಾ ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.

- **ಶೈಕ್ಷಣಿಕ ಶುಲ್ಕ, ಮರುಪಾವತಿ:-** ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ರಾಜ್ಯ ಮತ್ತು ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ಶೈಕ್ಷಣಿಕ ಶುಲ್ಕವನ್ನು ಇಲಾಖೆಯಿಂದ ಮರುಪಾವತಿ ಮಾಡುವ ಮೂಲಕ ಪ್ರತಿಭಾವಂತ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವುದು. ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. **ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳ ಅಧಿಕೃತ** ಬೋಧನಾ ಶುಲ್ಕಗಳನ್ನು ವಾರ್ಷಿಕ ರೂ.50,000/-ಗಳ ಗರಿಷ್ಠ ಮೊತ್ತಕ್ಕೆ ಮರುಪಾವತಿ ಮಾಡತಕ್ಕದ್ದು, ಇದರಲ್ಲಿ ಕಟ್ಟಡ ಶುಲ್ಕ, ಡೊನೇಷನ್, ನಿರ್ವಹಣಾ ಶುಲ್ಕ, ಸಾಂಸ್ಕೃತಿಕ **ಕಾರ್ಯಕ್ರಮ ಶುಲ್ಕ ಇನ್ನಿತರೆ ಶುಲ್ಕಗಳನ್ನು ಪಾವತಿಸಲು ಅವಕಾಶವಿರುವುದಿಲ್ಲ.**

- **ಪರಿಶಿಷ್ಟ ಜಾತಿ ಮತ್ತು ಪಂಗಡದ** ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ ವಿತರಿಸಲಾಗುತ್ತಿದೆ. ಅಂತರ-ರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ.5.00, 3.00 ಮತ್ತು 1.00 ಲಕ್ಷಗಳ ನಗದು ಪುರಸ್ಕಾರ ನೀಡಲಾಗುತ್ತಿದೆ ಹಾಗೂ ಅಂತರಾಷ್ಟ್ರೀಯ/ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಜಿಮ್ ಸಾಮಗ್ರಿಗಳನ್ನು ನೀಡಲಾಗುತ್ತಿದೆ.

- **ಏಕಲವ್ಯ ಪ್ರಶಸ್ತಿ:**-ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು. **ಜೀವಮಾನ ಸಾಧನೆ ಪ್ರಶಸ್ತಿ:**- ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ ನೀಡಿದ ರಾಜ್ಯದ ತರಬೇತುದಾರರಿಗೆ ಅವರ ಜೀವಮಾನ ಸಾಧನೆಗೆ ಪ್ರಶಸ್ತಿ ನೀಡಲಾಗುವುದು.

- **ಸಾಮಾನ್ಯ ಪ್ರವೇಶ ಪರೀಕ್ಷೆ:** ರಾಷ್ಟ್ರ ಮತ್ತು ಅಂತರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕ್ರೀಡಾ ಮಿಸಲಾತಿ ಅಡಿಯಲ್ಲಿ ಇಂಜಿನಿಯರಿಂಗ್, ವೈದ್ಯಕೀಯ ಮತ್ತು ಇತರೆ ವೃತ್ತಿಪರ ಕೋರ್ಸ್ ಗಳಿಗೆ ಪ್ರವೇಶ ಕಲ್ಪಿಸಲಾಗಿತ್ತಿದೆ.

- **ಕ್ರೀಡಾ ಪೋಷಕ ಪ್ರಶಸ್ತಿ:**- ಕ್ರೀಡೆಯ ಅಭಿವೃದ್ಧಿಗೆ ಗಣನೀಯ ಕೊಡುಗೆ ನೀಡಿದ ಖಾಸಗಿ ಸಂಘ-ಸಂಸ್ಥೆಗಳಿಗೆ ಉತ್ತೇಜನ ನೀಡಲು ಕ್ರೀಡಾ ಪೋಷಕ ಪ್ರಶಸ್ತಿ ನೀಡಲಾಗುತ್ತಿದೆ.

- **ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಗುರುತಿಸಲು ಕೈಗೊಂಡ ಕ್ರಮ** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯವತಿಯಿಂದ ಫುಟ್ಬಾಲ್ ಕ್ರೀಡೆಯನ್ನೊಳಗೊಂಡಂತೆ ಇತರೆ ಎಲ್ಲಾ ಕ್ರೀಡೆಗಳಿಗೂ ತಾಲ್ಲೂಕು ಮಟ್ಟದಲ್ಲಿ ಪ್ರತಿಭೆಗಳನ್ನು ಗುರುತಿಸಲು ಇಲಾಖಾ ವ್ಯಾಪ್ತಿಯಲ್ಲಿ **ಸ್ಪೋರ್ಟ್ಸ್ ಸೈನ್ಸ್ ಸೆಂಟರ್‌ನ್ನು** ತೆರೆಯಲಾಗಿದ್ದು, ಇದರಲ್ಲಿ **ದೈಹಿಕ ಶಿಕ್ಷಕರಿಗೆ** ತರಬೇತಿಯನ್ನು ನೀಡಿ ಆ ಶಿಕ್ಷಕರು ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಲು, ತರಬೇತಿ ನೀಡಲಾಗಿರುತ್ತದೆ ಹಾಗೂ ಇಲಾಖೆಯ ನೂರಿತ ತರಬೇತುದಾರರು ಬ್ಯಾಟರಿ ಟೆಸ್ಟ್ ಮುಖಾಂತರ ಹಾಗೂ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸುವ ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ.

**ವೈಎಸ್‌ಡಿ/ಇಬಿಬಿ/122/2024**

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ